**SC No. 34/2018**
**PW.-25**

# 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು.

**ಎಸ್.ಸಿ. 34/2018**

| | | |
|---|---|---|
| ಸಾಕ್ಷಿದಾರರ ಹೆಸರು | ಸೈಯದ್ ಇಮ್ರಾನ್ | ಪ್ರಮಾಣ ವಚನ ಮಾಡಿದ ದಿನಾಂಕ: 11.11.2025 |
| ತಂದೆಯ ಹೆಸರು | ಸೈಯದ್ ಆರೀಫ್ | |
| ವಯಸ್ಸು | 36 ವರ್ಷ | |
| ವೃತ್ತಿ | ಮೊಬೈಲ್ ರಿಪೇರಿ ಕೆಲಸ | ಪ್ರಾ.ಸಾಃ 25 |
| ವಾಸ ಸ್ಥಳ | ಕಲ್ಯಾಣಗಿರಿ , ಮೈಸೂರು | ಚಾ.ಸಾಃ 32 |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕ ರಿಂದ:**

ನಾನು ನವೀದ್ ಅಹಮದ್ ರವರ ಕಡೆ ಮೊಬೈಲ್ ರಿಪೇರಿ ಕೆಲಸವನ್ನು ಕೆ.ಟಿ. ಸ್ಟ್ರೀಟ್ ನಲ್ಲಿ ಮಾಡಿಕೊಂಡಿರುತ್ತೇನೆ. ನನಗೆ ನ್ಯಾಯಾಲಯದ ಮುಂದೆ ಹಾಜರು ಇರುವ ಆರೋಪಿತರು ಗೊತ್ತಿರುವುದಿಲ್ಲ. ನನಗೆ ನೂರ್ ಇಕ್ಬಾಲ್ ರವರು ಗೊತ್ತಿರುವುದಿಲ್ಲ. ನನಗೆ ಸೈಯದ್ ಜಮೀಲ್ ಅಣ್ಣನಾಗಬೇಕು ಅವರು ಟಿವಿ ರಿಪೇರಿ ಕೆಲಸ ಮಾಡಿಕೊಂಡಿರುತ್ತಾರೆ. ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿತರು ನನ್ನ ಅಣ್ಣನ ಅಂಗಡಿಗೆ ಬಂದು ಕೂರುತ್ತಿದ್ದರ ಬಗ್ಗೆ ನನಗೆ ಗೊತ್ತಿರುವುದಿಲ್ಲ. ನಾನು ಯಾವುದಾದರೂ ಟಿವಿ ರಿಪೇರಿ ಕೆಲಸ ಇದ್ದಾಗ ನನ್ನ ಅಣ್ಣನ ಕಡೆ ಹೋಗಿ ರಿಪೇರಿ ಮಾಡಿಸಿಕೊಳ್ಳುತ್ತಿರಲಿಲ್ಲ. ನಾನು ನನ್ನ ಅಣ್ಣನ ಅಂಗಡಿಗೆ ಯಾವಾಗಲೂ ಹೋಗುತ್ತಿರಲಿಲ್ಲ. ನನಗೆ ಆರ್.ಎಸ್.ಎಸ್. ಲೀಡರ್ ರಾಜು

ಗೊತ್ತಿದ್ದರು. ಅವರು ಈಗ ಜೀವಂತ ಇರುವುದಿಲ್ಲ. ಅವರನ್ನು ಯಾರೋ ಕೊಲೆ ಮಾಡಿರುತ್ತಾರೆ. ನನಗೆ ಅವರನ್ನು ಕೊಲೆ ಮಾಡಿರುವ ವಿಚಾರ ನ್ಯೂಸ್ ಅಲ್ಲಿ ಗೊತ್ತಾಗಿತ್ತು. ಆರ್.ಎಸ್.ಎಸ್. ಲೀಡರ್ ರಾಜುರವರನ್ನು ಯಾರು ಕೊಲೆ ಮಾಡಿದ್ದರು ಎನ್ನುವ ಬಗ್ಗೆ ನನಗೆ ಗೊತ್ತಾಗಿರುವುದಿಲ್ಲ. ನನ್ನ ಅಣ್ಣ ನನ್ನ ಅಂಗಡಿಗೆ ಬಂದು ಆ ವಿಚಾರ ಮಾತನಾಡುತ್ತಿದ್ದರ ಬಗ್ಗೆ ಮತ್ತು ಆರೋಪಿತರು ನನ್ನ ಅಣ್ಣನ ಅಂಗಡಿಗೆ ಬರುತ್ತಿದ್ದರ ಬಗ್ಗೆಯಾಗಲೀ ಕೆಲವು ಕೊಲೆ ಪ್ರಯತ್ನದಲ್ಲಿ ಭಾಗಿ ಯಾಗಿರುವ ವಿಚಾರ ಮಾತನಾಡುತ್ತಿದ್ದರ ಬಗ್ಗೆ ನನ್ನ ಅಣ್ಣ ಸಿಸಿಬಿ ಪೊಲೀಸರ ಮುಂದೆ ಮತ್ತು ನ್ಯಾಯಾಧೀಶರ ಮುಂದೆ ಹೇಳಿಕೆ ಕೊಟ್ಟಿರುವ ವಿಚಾರ ನನಗೆ ಗೊತ್ತಿಲ್ಲ. ಪೊಲೀಸರು ಈ ಪ್ರಕರಣದ ಬಗ್ಗೆ ನನ್ನ ಹೇಳಿಕೆಯನ್ನು ತೆಗೆದುಕೊಂಡಿರುವುದಿಲ್ಲ. ಮತ್ತು ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ.

**ಈ ಹಂತದಲ್ಲಿ , ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.**

**ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕ ರಿಂದ:**

ನವುನಾನು ನೂರ್ ಇಕ್ಬಾಲ್ ರವರಿಂದ 2015 ನೇ ಸಾಲಿನಲ್ಲಿ ಕೆಟಿ ಸ್ಟ್ರೀಟ್ ನಲ್ಲಿ ಇರುವ ಅಂಗಡಿಯನ್ನು ಬಾಡಿಗೆ ಪಡೆದು ಅದರಲ್ಲಿ ಮೊಬೈಲ್ ಅಂಗಡಿ ಇಟ್ಟುಕೊಂಡು

ಮುಂಗಡವಾಗಿ ರೂ 7,000/- ಅಡ್ವಾನ್ಸ್ ನೀಡಿ ಪ್ರತಿ ತಿಂಗಳು ರೂ1,500/- ಬಾಡಿಗೆ ನೀಡುತ್ತಿದ್ದೆ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿತರು ನನ್ನ ಅಣ್ಣನ ಸ್ನೇಹಿತರು ಇದ್ದು ಅವರು ನನ್ನ ಅಣ್ಣನನ್ನು ನೋಡಲು ನನ್ನ ಅಣ್ಣನ ಅಂಗಡಿಗೆ ಬಂದು ಕುರುತ್ತಿದ್ದರು ಎಂದರೆ ಸರಿಯಲ್ಲ. ನಾನು ಕೆಲಸ ಇದ್ದಾಗ ಅಂಗಡಿಯಲ್ಲಿ ಕುಳಿತುಕೊಳ್ಳುತ್ತಿದ್ದು ಕೆಲಸ ಇಲ್ಲದಾಗ ನನ್ನ ಅಣ್ಣನಿಗೆ ಅಂಗಡಿ ಬಿಟ್ಟು ಹೊರಗೆ ಹೋಗುತ್ತಿದ್ದೆ ಎಂದರೆ ಸರಿಯಲ್ಲ. ಸಿಸಿಬಿ ಪೊಲೀಸರು ಆರ್ ಎಸ್ ಎಸ್ ರಾಜುವನ್ನು ಕೊಲೆ ಮಾಡಿದ್ದ ವ್ಯಕ್ತಿಗಳನ್ನು ಬಂಧಿಸಿದ ವಿಚಾರ ನನಗೆ ಗೊತ್ತಾಗಿತ್ತು ಎಂದರೆ ಸರಿಯಲ್ಲ. ನನ್ನ ಅಣ್ಣನ ಅಂಗಡಿಗೆ ಬಂದು ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿತರು ಮಾತನಾಡುತ್ತಿದ್ದು ಮತ್ತು ಕೊಲೆ ಪ್ರಯತ್ನದಂತಹ ಪ್ರಕರಣಗಳಲ್ಲಿ ಭಾಗಿಯಾಗಿರುವ ವಿಚಾರ ಮಾತನಾಡುತ್ತಿದ್ದರ ಬಗ್ಗೆ ನನ್ನ ಅಣ್ಣ ಸಿಸಿಬಿ ಪೊಲೀಸರ ಮುಂದೆ ಮತ್ತು ಕೋರ್ಟ್ ಗೆ ಹೋಗಿ ನ್ಯಾಯಾಧೀಶರ ಮುಂದೆ ಹೇಳಿಕೆ ನೀಡಿದ್ದರ ವಿಚಾರ ನನಗೆ ಗೊತ್ತಿತ್ತು ಎಂದರೆ ಸರಿಯಲ್ಲ. ಈಗ ಓದಿ ಹೇಳಿದ ನಿಪಿ-39 ರಂತೆ ಪೊಲೀಸರ ಮುಂದೆ ಹೇಳಿಕೆ ಕೊಟ್ಟಿದ್ದೆ ಎಂದರೆ ಸರಿಯಲ್ಲ. ನನಗೆ ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿತರ ಬಗ್ಗೆ ಮಾಹಿತಿ ಇದ್ದರೂ ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿಗಳ ಪರ ವಕೀಲರಿಂದ :**

**ಆರೋಪಿತರ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ನುಡಿದಿರುತ್ತಾರೆ.**

**<u>ಮರವಿಚಾರಣೆಃ ಇಲ್ಲ</u>**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಎ ಒ

**4 ನೇ ಅಪರ ಜಿಲ್ಲಾ ಮತ್ತು ಸತ್ರ**
**ನ್ಯಾಯಾಧೀಶರು, ಮೈಸೂರು.**